ಕಾಪು ಕ್ಷೇತ್ರದ ಫಿಲಾರುಖಾನದಿಂದ ಸೂಡ-ಸಂಬ್ರಮಣ್ಯ ರಸ್ತೆ ಡಾಮರು ಹಾಕುವ ಕಾರ್ಯದ ಬಗ್ಗೆ

೪೦೪. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾಪು ಕ್ಷೇತ್ರದ ಫಿಲಾರುಖಾನದಿಂದ ಸೂಡ-ಸಂಬ್ರಮಣ್ಯ ರಸ್ತೆಗೆ ಡಾಮರು ಹಾಕುವ ಕಾರ್ಯದ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸದರಿ ರಸ್ತೆಯನ್ನು ನಿರ್ವಹಣೆಗಾಗಿ ಸರ್ಕಾರಿ ಆಜ್ಞೆಯು ಸಂಖ್ಯೆ ಪಿಡಬ್ಲ್ಯೂಡಿ ೩೦೯ ಪಿ.ಎಸ್.ಆರ್. ೮೨ ದಿನಾಂಕ ೨೭-೧೨-೮೪ ರಂದು ಲೋಕೋಪಯೋಗಿ ಇಲಾಖೆಯ ಪಶ್ಚಿಮ ತೆಗೆದುಕೊಳ್ಳಲಾಗಿದೆ. ರಸ್ತೆಯ ಪ್ರಾಮುಖ್ಯತೆಯನ್ನು ಅನುಸರಿಸಿ ಹಣಕಾಸಿನ ಲಭ್ಯತೆಗನುಗುಣವಾಗಿ, ಡಾಂಬರ್ ಹಾಕುವಕೆಲಸವನ್ನು ಮುಂಬರುವ ವರ್ಷಗಳಲ್ಲಿ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರ್ಯಾಲೋಚಿಸಲಾಗುವುದು.

ಮಾರ್ಕಂಡೇಯ ಯೋಜನೆ

೪೦೫. ಶ್ರೀ ಎಂ. ಎಲ್, ಮಂತ್ರಣ್ಣನವರ್ (ಗೋಕಾಕ್).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾರ್ಕಂಡೇಯ ಯೋಜನೆಯ ಸರ್ವೇ ಕೆಲಸ ಪೂರೈಗಿದಿದೆಯೇ,

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು,

ಇ) ವಿಶ್ವಬ್ಯಾಂಕ್ ನೆರವಿನಿಂದ ಈ ಯೋಜನೆ ಕೈಗೊಳ್ಳಲು ಸರ್ಕಾರದವರು ತೀರ್ಮಾನಿಸಿದ್ದಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಈ ಯೋಜನೆಗೆ ಕೇಂದ್ರ ಜಲ ಆಯೋಗದ ಸಹಮತಿ ಪಡೆದ ಮೇಲೆ ದೊರಕುವ ಸಂಪನ್ಮೂಲಗಳ ಆಧಾರದ ಮೇಲೆ ಕೆಲಸವನ್ನು ತೆಗೆದುಕೊಳ್ಳಲು ಯೋಚಿಸಿದೆ.

ಇ) ಇಲ್ಲ.

ಅಥಣಿ ತಾಲ್ಲೂಕಿನ ಕೃಷ್ಣನದಿಗೆ ಅಡ್ಡಲಾಗಿ ಹಿಪ್ಪರಗಿ ಬಳಿ ಕಟ್ಟಬೇಕಾಗಿರುವ ಒಡ್ಡಿನ ಬಗ್ಗೆ

೧೮೫. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣಾ ನದಿಗೆ ಅಡ್ಡಲಾಗಿ ಹಿಪ್ಪರಗಿ ಬಳಿ ನಿರ್ಮಾಣ ಮಾಡಲು ಸರ್ಕಾರದವರು ತೆಗೆದುಕೊಂಡಿರುವ ಕಾರ್ಯಕ್ರಮವೇನು, ಹಾಗೂ ಈ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡಲಾಗುವುದು.

ಆ) ಹಿಪ್ಪರಗಿ ಬ್ಯಾರೇಜಿನ ನಿರ್ಮಾಣ ಕಾರ್ಯದಲ್ಲಿ ಮುಳುಗಡೆ ಆಗತಕ್ಕಂಥ ಜಮೀನಿನ ಕ್ಷೇತ್ರ ವೆಷ್ಟು. ಹಾಗೂ ಸದರಿ ಬ್ಯಾರೇಜಿನಲ್ಲಿ ಸಂಗ್ರಹವಾಗತಕ್ಕಂಥ ನೀರಿನ ಮೊತ್ತವೆಷ್ಟು ?